# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಲೆ-2/145/NFCH/2023

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಬೆಂಗಳೂರು-560 001, **ದಿನಾಂಕ:22.11.2023.**

## ಸುತ್ತೋಲೆ

ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದಡಿಯಲ್ಲಿ ಬರುವ ರಾಷ್ಟ್ರೀಯ ಕೋಮು ಸೌಹಾರ್ದ ಸಂಸ್ಥೆಯು. ಕೋಮು ಸೌಹಾರ್ದ. ರಾಷ್ಟ್ರೀಯ ಐಕ್ಯತೆ ಮತ್ತು ಸಹೋದರತ್ವ ಭಾವನೆಯನ್ನು ಮೂಡಿಸಲು ಅವಿರತವಾಗಿ ದುಡಿಯುತ್ತಿರುವ ಸಂಸ್ಥೆಯಾಗಿದ್ದು. ದಿನಾಂಕ:24.11.2023 ರಂದು ಫ್ಲಾಗ್ ದಿನವನ್ನಾಗಿ ಆಚರಿಸುತ್ತಿರುವುದರಿಂದ ಈ ದಿಸೆಯಲ್ಲಿ ರಾಷ್ಟ್ರಾದ್ಯಂತ ಸ್ಟಿಕ್ಕರ್ ಫ್ಲಾಗ್‌ಗಳನ್ನು ಮಾರಾಟ ಮಾಡಿ ಈ ಕಾರ್ಯಕ್ಕಾಗಿ ವಂತಿಗೆಯನ್ನು ಸಂಗ್ರಹಿಸುತ್ತಿರುವರು. ಅದರಂತೆ ವಿಧಾನ ಪರಿಷತ್ತಿನ ಸಚಿವಾಲಯಕ್ಕೂ ಸ್ಟಿಕ್ಕರ್ ಫ್ಲಾಗ್‌ಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಸದರಿ ಸ್ಟಿಕ್ಕರ್ ಫ್ಲಾಗ್‌ಗಳನ್ನು ಈ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರು ಖರೀದಿಸುವ ಮೂಲಕ ವಂತಿಗೆಯನ್ನು ಸಂಗ್ರಹಿಸಲು ಸಹಕರಿಸುವಂತೆ ಸೂಚಿಸಲಾಗಿದೆ.

ಆದುದರಿಂದ, ಸ್ಟಿಕ್ಕರ್ ಫ್ಲಾಗ್‌ಗಳನ್ನು ಸ್ವಯಂ ಪ್ರೇರಣೆಯಿಂದ ಖರೀದಿಸಲು ಇಚ್ಛಿಸುವ ಅಧಿಕಾರಿ/ನೌಕರರುಗಳು ನಿಮ್ಮ ಇಚ್ಛೆಯನುಸಾಗ ಹಣವನ್ನು ಲೆಕ್ಕಪತ್ರ ಶಾಖೆಯಲ್ಲಿ ಪಾವತಿಸಿ ಸ್ಟಿಕ್ಕರ್ ಫ್ಲಾಗ್‌ಗಳನ್ನು ಖರೀದಿಸುವ ಮೂಲಕ ಹಾಗೂ ಆದಾಯ ತೆರಿಗೆ 80ಜಿ(2)[iii(e)] ರಡಿ 100% ವಿನಾಯಿತಿ ಪಡೆಯುವ ಮೂಲಕ ಸಹಕರಿಸುವಂತೆ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ ತಿಳಿಸಲಾಗಿದೆ.

Anasuyamma
(ಅನಸೂಯಮ್ಮ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ:

ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ,(ಶಾಸಕರ ಭವನವೂ ಸೇರಿದಂತೆ)

**ಪ್ರತಿಗಳು:**

1. ಸಂಬಂಧಪಟ್ಟ ಕಡತಕ್ಕೆ.
2. ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು